**SC No.39 /2024**
**PW-2**
**CW-2**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **39/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗೋಪಾಲ ಕಾದರವಾಡಕರ್ | ಪ್ರಾಸಾ: 2 |
| ಗಂಡನ ಹೆಸರು | : | ರಾಮಚಂದ್ರ ಕಾದರವಾಡಕರ್ | ಚಾಸಾ: 2 |
| ವಯಸ್ಸು | : | 67 ವರ್ಷ | ದಿನಾಂಕ : 17.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಸೇನಾನಿ | |
| ವಾಸಸ್ಥಳ | : | ವಿನಾಯಕ ನಗರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಮೃತ ಪ್ರಿಯಾಂಕಾ ಗೊತ್ತು. ಆಕೆ 2023ನೇ ಸಾಲಿನಲ್ಲಿ ಜೂಲೈ ತಿಂಗಳಿನಿಂದ ಸುಮಾರು 3 ತಿಂಗಳುಗಳ ಕಾಲ ನನ್ನ ಮನೆಯಲ್ಲಿ ಬಾಡಿಗೆಗೆ ಇದ್ದಳು. ಆ ಮನೆಯ ಮೇಲ್ಭಾಗದಲ್ಲಿ ನಾನು ವಾಸಮಾಡಿಕೊಂಡಿದ್ದು, ಕೆಳಭಾಗದಲ್ಲಿ ಮೃತ ಪ್ರಿಯಾಂಕಾ ಬಾಡಿಗೆಗೆ ಇದ್ದಳು.

2. ದಿ: 04.09.2023 ರಂದು ರಾತ್ರಿ 10-45 ಗಂಟೆಗೆ ಚಾಸಾ-8 ರವರು ನನಗೆ ಫೋನ್ ಮಾಡಿ ಪ್ರಿಯಾಂಕಾ ಬಾಡಿಗೆಗೆ ಇರುವ ಮನೆಯ ಕಡೆಗೆ ಹೋಗಿ ನೋಡಿ ಆಕೆ

ಏನಾದರೂ ಮಾಡಿಕೊಂಡಿರಬಹುದು ಎಂದು ತಿಳಿಸಿದರು. ನಾನು ಆಕೆಯ ಮನೆಗೆ ಬಂದು ನೋಡಿದಾಗ ಮನೆಯ ಬಾಗಿಲು ಹಾಕಿತ್ತು. ನಾನು ಆ ಮನೆಯ ಕಿಟಕಿಯ ಮೂಲಕ ನೋಡಿದಾಗ ಪ್ರಿಯಾಂಕಾ ನೇಣು ಹಾಕಿಕೊಂಡಿರುವುದು ಕಂಡು ಬಂತು. ಆ ಕಾಲಕ್ಕೆ ಆಕೆಯ ಮೊಬೈಲ್ ಚಾಲು ಸ್ಥಿತಿಯಲ್ಲಿದ್ದುದ್ದು ಕಂಡು ಬಂತು. ನಾನು ಈ ವಿಚಾರವನ್ನು ಫೋನ್ ಮಾಡಿ ಪೋಲಿಸರಿಗೆ ತಿಳಿಸಿದೆನು. ನಾನು ಪ್ರಿಯಾಂಕಾಳ ತಂದೆ ತಾಯಿಗೆ ಫೋನ್ ಮಾಡಿ ತಿಳಿಸಿದ್ದು ಅವರು ಕೂಡಲೇ ಸ್ಥಳಕ್ಕೆ ಬಂದಿದ್ದರು. ಪೋಲಿಸರು ಬಂದು ಮನೆಯ ಬಾಗಿಲನ್ನು ಒಡೆದು ಪ್ರಿಯಾಂಕಾಳ ಶವವನ್ನು ಕೆಳಗೆ ಇಳಿಸಿದ್ದರು. ಆ ಬಳಿಕ ಪೋಲಿಸರ ಸ್ಥಳದಲ್ಲಿ ಕ್ರಮವನ್ನು ಜರುಗಿಸಿ ಆ ನಂತರ ಶವವನ್ನು ಸಿವಿಲ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ನಾನು ಶವವನ್ನು ನೋಡಿದಾಗ ಆಕೆಯ ನಾಲಿಗೆ ಹೊರಗೆ ಬಂದಿತ್ತು. ಪೋಲಿಸರು ಆ ಕಾಲಕ್ಕೆ ಒಂದು ಶವ ಪಂಚನಾಮೆಯನ್ನು ಮಾಡಿದ್ದರು. ಆ ಶವ ಪಂಚನಾಮೆಯನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಗಿದೆ.

3. ಇದಾದ ಸುಮಾರು 4-5 ದಿನಗಳ ನಂತರ ಪೋಲಿಸರು ಪುನಃ ಆ ಮನೆಗೆ ಬಂದು ಅಲ್ಲಿ ಎಂದು ಪಂಚನಾಮೆಯನ್ನು ಮಾಡಿದ್ದರು. ಆ ಪಂಚನಾಮೆ ನಿಪಿ-2 ಆಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಗಿದೆ. ಆ ಪಂಚನಾಮೆಯ ಕಾಲಕ್ಕೆ ಚಾಸಾ-1 ಮತ್ತು ಇನ್ನೊಬ್ಬ ವ್ಯಕ್ತಿ ಇದ್ದರು. ಆ ಪಂಚನಾಮೆಯ ಕಾಲಕ್ಕೆ ಪೋಲಿಸರು ಸ್ಥಳದಿಂದ ಓಡ್ನಿಯ ತುಂಡನ್ನು ಅಮಾನತ್ತು ಪಡಿಸಿಕೊಂಡಿದ್ದರು. ಅದನ್ನು ನಾನು ಗುರುತಿಸುತ್ತಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ಆ ಪಂಚನಾಮೆಯ ಕಾಲಕ್ಕೆ ನಿಪಿ-3 ರಂತೆ ಫೋಟೊ ತೆಗೆದಿದ್ದರು. ಪೋಲಿಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

ಪಾಟೀ ಸವಾಲುಃ  ಆರೋಪಿತರ ಪರವಾಗಿಃ  ಶ್ರೀ ಎ. ವಿ. ಎನ್. ವಕೀಲರಿಂದಃ

4. ಪ್ರಿಯಾಂಕಾ ಕೆಲಸಕ್ಕೆ ಇದ್ದ ಅಂಗಡಿಯ ಮಾಲೀಕರು ನನಗೆ ಪೋನ್ ಮಾಡಿದ್ದು ಅವರು ಹೆಸರು ಸರಿಯಾಗಿ ನೆನಪಿಲ್ಲ. ಅವರು ಪೋನ್ ಮಾಡಿದಾಗ ರಾತ್ರಿ 11-00 ಗಂಟೆಯಾಗಿತ್ತು. ಆ ಅಂಗಡಿಯ ಮಾಲೀಕರು ನಮ್ಮ ಕಾಲನಿಯಲ್ಲಿಯೇ ವಾಸಮಾಡಿಕೊಂಡಿರುವುದರಿಂದ ನನಗೆ ಅವರ ಪರಿಚಯವಿದೆ. ಅಂಗಡಿಯ ಮಾಲೀಕರು ನನಗೆ ಪೋನ್ ಮಾಡಿ ಪ್ರಿಯಾಂಕಾ ಅಂಗಡಿಯಲ್ಲಿ ಜಗಳ ಮಾಡಿ ಹೋಗಿರುವುದರಿಂದ ಆಕೆಯನ್ನು ಸ್ವಲ್ಪ ನೋಡಿ ಎಂದು ನನಗೆ ಪೋನ್ ಮಾಡಿ ಹೇಳಿದ್ದರು. ಅವರು ಪೋನ್ ಮಾಡಿದಾಗ ನಾನು ನಮ್ಮ ಮನೆಯ ಮುಂಭಾಗ ಒಂದು ಸಮಾರಂಭ ಇದ್ದು ಅಲ್ಲಿ ಊಟ ಮಾಡಲು ಹೋಗಿದ್ದೇನು. ಅಂಗಡಿಯಲ್ಲಿ ಪ್ರಿಯಾಂಕಾ ಯಾರೊಂದಿಗೆ ಜಗಳ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪೋನ್ ಬಂದ ಕೆಲವೇ ನಿಮಿಷದಲ್ಲಿ ಪ್ರಿಯಾಂಕಾಳ ಮನೆ ಬಳಿ ಬಂದಿದ್ದೇನು. ಪ್ರಿಯಾಂಕಾಳ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಮುಖ ಮಾಡಿಕೊಂಡಿದೆ. ನಾನು ಕಿಟಕಿಯಿಂದ ನೋಡಿದಾಗ ಪ್ರಿಯಾಂಕಾ ನೇಣು ಹಾಕಿಕೊಂಡಿದ್ದು, ಆಕೆಯ ಶವ ನೇತಾಡುತ್ತಿತ್ತು. ಪ್ರಿಯಾಂಕಾ ನೇಣು ಹಾಕಲು ಉಪಯೋಗಿಸಿದ ಓಡ್ನಿ ನೀಲಿ ಬಣ್ಣದ ರೀತಿಯಲ್ಲಿ ಕಾಣಿಸುತ್ತಿತ್ತು. ಶವವನ್ನು ನೋಡಿದ ನಂತರ ನಾನು ಪೋಲಿಸರಿಗೆ ಪೋನ್ ಮಾಡಿ ಈ ವಿಚಾರ ತಿಳಿಸಿದ್ದೇನು. ಪೋಲಿಸರು ಸ್ಥಳಕ್ಕೆ ಬಂದಾಗ ಮಧ್ಯರಾತ್ರಿ 12-00 ಗಂಟೆಯಾಗಿತ್ತು.

5. ಆ ದಿನ ರಾತ್ರಿ ಪಂಚನಾಮೆಯನ್ನು ಪೋಲಿಸರು ಬೆಳಗಿನ ಜಾವ 4-00 ಗಂಟೆಯವರೆಗೆ ಮಾಡಿದ್ದರು. ನಾನು ಆ ಮನೆಯನ್ನು ಪ್ರಿಯಾಂಕಾಳಿಗೆ ಬಾಡಿಗೆಗೆ ಕೊಟ್ಟ ಬಗ್ಗೆ ಯಾವುದೇ ಅಗ್ರಿಮೆಂಟನ್ನು ಮಾಡಿಕೊಂಡಿರಲಿಲ್ಲ. ಮೃತ ಪ್ರಿಯಾಂಕಾ ನೇಣು ಹಾಕಿಕೊಳ್ಳುವ ಕಾಲಕ್ಕೆ ನೀಲಿ ಬಣ್ಣದ ಚೂಡಿದಾರ ಹಾಕಿಕೊಂಡಿದ್ದಳು. ಚಾಸಾ-8 ರವರು

ನನಗೆ ಪೋನ್ ಮಾಡಿ ಪ್ರಿಯಾಂಕಾ ಜಗಳ ಮಾಡಿ ಹೋಗಿದ್ದಾಳೆ ಮತ್ತು ಆಕೆಯನ್ನು ಸ್ವಲ್ಪ ನೋಡಿ ಎಂದು ಹೇಳಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

6. ನಿಪಿ-2 ಪಂಚನಾಮೆ ಮಾಡುವ ಬಗ್ಗೆ ಪೋಲಿಸರು ಸಂಜೆ 5-00 ಸುಮಾರಿಗೆ ಆ ಮನೆಗೆ ಬಂದಿದ್ದರು. ಆ ಪಂಚನಾಮೆ ಮಾಡುವ ಕಾಲಕ್ಕೆ ಇನ್ನೊಬ್ಬ ವ್ಯಕ್ತಿ ಇದ್ದು ನನಗೆ ಅವರ ಹೆಸರು ನೆನಪಿಲ್ಲ. ನಾನು ಆ ಪಂಚನಾಮೆ ಮಾಡಿದ ಸ್ಥಳದಲ್ಲಿಯೇ ಸಹಿ ಮಾಡಿದ್ದೇನು. ಆ ಪಂಚನಾಮೆಯನ್ನು ಪೋಲಿಸರು ಬರೆದಿದ್ದು, ನನಗೆ ಅವರ ಹೆಸರು ತಿಳಿದಿಲ್ಲ. ಆ ಪಂಚನಾಮೆಯಲ್ಲಿ ಎನು ಬರೆದಿದೆ ಎಂದು ನನಗೆ ಈಗ ನೆನಪಿಲ್ಲ. ನಾನು ಒಂದು ಖಾಲಿ ಹಾಳೆಗೆ ಸಹಿ ಮಾಡಿದ್ದೆ ಎನ್ನುವುದು ನಿಜವಲ್ಲ. ನನಗೆ ಅದರಲ್ಲಿ ಎನು ಬರೆದಿದ್ದಾರೆ ಎನ್ನುವ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಅದನ್ನು ನನಗೆ ಓದಿ ಹೇಳಿದ್ದರು ಎನ್ನುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎನ್ನುವುದು ನಿಜವಲ್ಲ.

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.